ಮರದ ಕೆತ್ತನೆಯಿರುವ ಸುಂದರವಾದ ಶಾಲೆಗಳು. ನೋಡುತ್ತ ನೋಡುತ್ತ ಶಾಲೂ ತುಸು ದೂರ ನಡೆದಳು. ಮುಂದೆ ವಿಶಾಲವಾದ ಲ್ಯಾಂಡ್‌ಸ್ಕೇಪ್. ಅದರ ಮೇಲೆ ನಡೆಯುತ್ತ ನಡೆಯುತ್ತ ಒಂದಿಷ್ಟು ದೂರ ಬಂದವಳು ಮುಂದೆ ಭೂಮಿ ಇಳಿಜಾರಾಗುತ್ತ ಸಾಗಿರುವುದನ್ನು ನೋಡಿ ಅಲ್ಲಿಯೇ ನಿಂತಳು. ಸುತ್ತಲೂ ದೂರದಲ್ಲಿ ಬೆಳ್ಳಿಯ ಬೆಟ್ಟಗಳ ಸಾಲು. ಹಿಮವನ್ನು ಹೊತ್ತ ಪರ್ವತಗಳ ಶ್ರೇಣಿಯನ್ನು ನೋಡುತ್ತ ಶಾಲೂ ಮೈಮರೆತಳು. ಎಷ್ಟೆಲ್ಲ ಸೌಂದರ್ಯವನ್ನು ಭಗವಂತ ಈ ಭೂಮಿಯ ಮೇಲೆ ಇಟ್ಟಿದ್ದಾನೆ! ಈ ಸೃಷ್ಟಿಯ ಅಗಾಧತೆಯ ಎದುರು ಮಾನವನ ಸಾಧನೆಗಳೆಲ್ಲ ತೃಣಕ್ಕೆ ಸಮಾನ. ದೇಶ ನೋಡು ಇಲ್ಲವೇ ಕೋಶ ಓದು ಎನ್ನುತ್ತಾರೆ. ಆದರೆ, ಇಂಥ ಸೌಂದರ್ಯವನ್ನು ಸ್ವಂತ ಕಣ್ಣುಗಳಿಂದ ನೋಡಿಯೇ ಅನುಭವಿಸಬೇಕು ಎನಿಸಿತು. ಜೀವನದಲ್ಲಿ ಒಮ್ಮೊಮ್ಮೆ ಸಿಗುವ ಇಂಥ ಕ್ಷಣಗಳನ್ನು ಕಳೆದುಕೊಂಡ ಸಂದೇಶ, ರಸಿಕತೆಯಿಲ್ಲದ ಮನುಷ್ಯ. ಅವನೂ ಬಂದಿದ್ದರೆ ಈ ಚಳಿಯಲ್ಲಿ ಇಬ್ಬರೂ ಬೆಚ್ಚಗೆ ಕೈಕೈ ಹಿಡಿದು ಓಡಾಡಬಹುದಿತ್ತು. ಹೂಂ, ಬಂದಿದ್ದರೂ ಕೈ ಹಿಡಿದು ಓಡಾಡುತ್ತಿದ್ದನೋ ಇಲ್ಲವೋ, ನನ್ನ ಅವನ ಅಭಿರುಚಿಗಳು ಅದೆಷ್ಟು ಭಿನ್ನ! ಬೇಡ, ಬರೀ ಇಂಥದ್ದೇ ಯೋಚಿಸಿ ಸುಂದರ ಸಂಜೆಯನ್ನು ಹಾಳು ಮಾಡಿಕೊಳ್ಳುವುದೇಕೆ? ತಕ್ಷಣ ಶಾಲೂನ ಮನದ ಕನ್ನಡಿಯಲ್ಲಿ ಫೆಲಿಕ್ಸನ ಪ್ರತಿಬಿಂಬ ನಕ್ಕಿತು. ಥೂ, ಅವನನ್ನೇಕೆ ನೆನೆಯಬೇಕು ನಾನು? ನಿನ್ನೆ ಅವನು ಹಾಗೆ ಮಾಡಿದ್ದು ತಪ್ಪು. ಆದರೆ, ಅವನು ಹಾಗೊಂದು ಮುತ್ತು ಕೊಡದೇ ಇದ್ದಿದ್ದರೆ ಕಲ್ಲಾಗಿ ಹೋಗಿದ್ದ ನನ್ನ ಮನಸ್ಸು ಹೀಗೊಮ್ಮೆ ಈ ವಯಸ್ಸಿನಲ್ಲಿ ನದಿಯಾಗಿ ಹರಿಯುತ್ತಿತ್ತೇ?

ಒಮ್ಮೆಲೆ ಬೀಸಿದ ತಂಪು ಗಾಳಿಗೆ ಶಾಲೂನ ಮೈ ನಡುಗಿ ಮುಂದೆ ವಾಲಿತು. ಅವಳ ಕಾಲುಗಳೂ ಸಮತೋಲನ ಕಳೆದುಕೊಂಡು ಅಪ್ರಯತ್ನವಾಗಿ ಒಂದು ಹೆಜ್ಜೆ ಮುಂದೆ ಹೋಗಿ ಇನ್ನೇನು ಎದುರುಗಡೆಯ ಇಳಿಜಾರಿನಲ್ಲಿ ಶಾಲೂ ಬೀಳುತ್ತಿದ್ದಳು. ಆದರೆ, ಒಂದು ಬಲಿಷ್ಠವಾದ ಕೈ ಅವಳನ್ನು ಬೀಳದಂತೆ ತಡೆಹಿಡಿಯಿತು. ಮತ್ತು ಅನಾಮತ್ತಾಗಿ ಮೇಲೆಳೆದುಕೊಂಡಿತು. ಹೆದರಿಕೆಯಿಂದ ನಡುಗುತ್ತಿದ್ದ ಶಾಲೂ ತಿರುಗಿ ನೋಡಿದಳು. ''ಇಳಿಜಾರಿನಲ್ಲಿ ನಿಂತವರು ಹುಷಾರಾಗಿ ಇರಬೇಕು. ಸ್ವಲ್ಪ ನಿರ್ಲಕ್ಷ್ಯ ತೋರಿದರೂ ಪ್ರಪಾತಕ್ಕೆ ಬೀಳುವ ಅಪಾಯವಿರುತ್ತದೆ'' ಎಂದು ನಕ್ಕ ಫೆಲಿಕ್ಸ್. ಶಾಲೂ ದೀರ್ಘವಾಗಿ ಉಸಿರೆಳೆದುಕೊಳ್ಳುತ್ತ ಅವನನ್ನೇ ನೋಡಿದಳು. ಅದೇನೂ ಅಂಥ ಆಳವಾದ ಪ್ರಪಾತವಲ್ಲ ಎಂದು ಹೇಳಲೇ? ಎಂದುಕೊಂಡರೂ ಸುಮ್ಮನಾದಳು. ಇನ್ನೂ ತನ್ನ ಕೈಯನ್ನು ಹಿಡಿದೇ ಇದ್ದ ಅವನ ಕೈಯಿಂದ ಬಿಡಿಸಿಕೊಂಡು, ''ಥ್ಯಾಂಕ್ಸ್ ಫೆಲಿಕ್ಸ್. ನೀನು ನನ್ನ ಪತಿ ಮತ್ತು ಮಕ್ಕಳಿಗೆ ನನ್ನನ್ನು ಉಳಿಸಿಕೊಟ್ಟದ್ದಕ್ಕಾಗಿ'' ಎಂದು ಹೇಳಿ ಸರಸರನೇ ತನ್ನ ಹೋಟೆಲ್‌ನ ದಿಕ್ಕಿಗೆ ನಡೆದಳು.

## ನೀತಾ ರಾವ್

ಲೇಖಕಿ ಬೆಳಗಾವಿಯವರು. ಎಂ.ಕಾಂ., ಪಿಎಚ್.ಡಿ. ಪದವೀಧರೆ. ಕೆಲಕಾಲ ಬ್ಯಾಂಕ್ ಉದ್ಯೋಗಿಯಾಗಿದ್ದ ಅವರು ಪ್ರಸ್ತುತ ಕಾಲೇಜು ಅಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ಪತ್ರಿಕೆಗಳಲ್ಲಿ ಲೇಖನಗಳು, ಪ್ರಬಂಧಗಳು, ಮತ್ತು ಕತೆಗಳು ಪ್ರಕಟವಾಗಿವೆ. 'ಅಂತಃಪುರ' (ಅಂಕಣ ಬರಹಗಳು) ಹಾಗೂ 'ಹತ್ತನೇ ಕ್ಲಾಸಿನ ಹುಡುಗಿಯರು' (ಲಲಿತ ಪ್ರಬಂಧಗಳು) – ಅವರ ಪ್ರಕಟಿತ ಪುಸ್ತಕಗಳಾಗಿವೆ.